1	2	3	4	5	6
2.	ಅಂಕೋಲ	12) ಕಾಕರ ಮಠ	3 ಪಿ	1.50	ಬೀದಿ ದೀಪ ಕೊಳವೆ ಬಾವಿ
3.	ಯಲ್ಲಾಪುರ	13) ನೂತನ ನಗರ	3 ಪಿ	—	
		14) ರವೀಂದ್ರ ನಗರ	3 ಪಿ	—	
		15) ಮಂಜುನಾಥ ನಗರ	3 ಪಿ	—	
				ಒಟ್ಟು 5.00	

ಸೀ-ಬರ್ಡ್ ಯೋಜನೆ.

1573(2148) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೀ-ಬರ್ಡ್ ಯೋಜನೆಯಲ್ಲಿ ಯಾವ ಯಾವ ಪ್ರದೇಶ ತೆರವುಗೊಳಿಸಲಾಗಿದೆ ಅದರಿಂದ ಆಗಿರುವ ನಿರಾಶ್ರಿತ ಕುಟುಂಬಗಳ ಸಂಖ್ಯೆ ಎಷ್ಟು ; ಅವರು ಕಳೆದುಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು ಹಾಗೂ ಇನ್ನಿತರ ಸ್ಥಿರ-ಚರ ಆಸ್ತಿಗಳೆಷ್ಟು ;

ಆ) ನಿರಾಶ್ರಿತ ಕುಟುಂಬಗಳಿಗೆ ಸರ್ಕಾರ ನೀಡಲಿರುವ ಪರಿಹಾರಗಳೇನು;

ಇ) ನಿರಾಶ್ರಿತ ಕುಟುಂಬಗಳಿಗೆ ಎಲ್ಲೆಲ್ಲಿ ಆಶ್ರಯ ನೀಡಲಾಗಿದೆ;

ಈ) ನಿರಾಶ್ರಿತ ಕುಟುಂಬಗಳಿಗೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಸೀ-ಬರ್ಡ್ ಯೋಜನೆಯಲ್ಲಿ ಅರಗಾ, ಬಿಣಗಾ ಮತ್ತು ಚೆಂಡಿಯಾ ಗ್ರಾಮದ ನೌಕಾನೆಲೆಗೆ ಭೂಸ್ವಾಧೀನಗೊಂಡ ಪ್ರದೇಶಗಳನ್ನು ತೆರವುಗೊಳಿಸಲಾಗಿದೆ. ಒಟ್ಟು 1819 ಕುಟುಂಬಗಳು ನಿರಾಶ್ರಿತರಾಗಿದ್ದು, ಅವರು ಕಳೆದುಕೊಂಡ ಜಮೀನಿನ ವಿಸ್ತೀರ್ಣ 656-28-13 ಆಗಿರುತ್ತದೆ. 1137 ಜನ ತಮ್ಮ ಸ್ಥಿರ-ಚರ ಆಸ್ತಿ (ಮನೆ) ಕಳೆದುಕೊಂಡಿದ್ದಾರೆ.

ಆ) ಪ್ರತಿ ನಿರಾಶ್ರಿತ ಕುಟುಂಬಕ್ಕೆ ಕಳೆದುಕೊಂಡ ಭೂಮಿ, ಗಿಡಮರ ಅಥವಾ ಕಟ್ಟಡಗಳಿಗೆ ಭೂ ಪರಿಹಾರ ನೀಡಲಾಗಿದೆ. ಕುಟುಂಬದ ಮುಖ್ಯಸ್ಥನಿಗೆ ರೂ. 50,000.00 ಪುನರ್ವಸತಿ ಅನುದಾನ ಮತ್ತು ಒಂದು ನಿವೇಶನ ನೀಡಲಾಗಿದೆ. 31-12-97ಕ್ಕೆ 18 ವರ್ಷ ಪೂರ್ತಿಗೊಂಡ ಇಬ್ಬರು ಮಕ್ಕಳಿಗೆ ತಲಾ ರೂ.70,000.00 ಹಾಗೂ 31-12-97ಕ್ಕೆ

35 ವರ್ಷ ಪೂರ್ತಿಗೊಂಡ ಒಬ್ಬ ಅವಿವಾಹಿತ ಹೆಣ್ಣು ಮಗಳಿಗೆ ರೂ.70,000.00 ಅನುಕಂಪ ಅನುದಾನ ನೀಡಲಾಗಿದೆ. ಇದಲ್ಲದೆ ರೂ. 5000.00 ಸಾಗಾಣಿಕೆ ವೆಚ್ಚ, ರೂ. 2800.00 ಔಷಧ ಮತ್ತು ಊಟ ವೆಚ್ಚವೆಂದು ನೀಡಲಾಗಿದೆ. ನಿರಾಶ್ರಿತರು ತಮ್ಮ ಕಟ್ಟಡಗಳಿಂದ ಹೆಂಚು ಕಟ್ಟಿಗೆ, ಕಲ್ಲು ಇತ್ಯಾದಿ ಸಾಮಗ್ರಿಗಳನ್ನು ಕೊಂಡೊಯ್ಯಲು ಅನುಮತಿ ನೀಡಲಾಗಿದೆ.

ಇ) ಚಿತ್ತಾಕುಲ, ಅರಗಾ, ಹಾರವಾಡ, ತೋಡೂರುಗಳಲ್ಲಿ ನಿವೇಶನ ನೀಡಲಾಗಿದೆ.

ಈ) ನಿರ್ದಿಷ್ಟ ತೊಂದರೆಗಳ ಬಗ್ಗೆ ಯಾವುದೇ ಪ್ರಕರಣಗಳು ಬಂದಿರುವುದಿಲ್ಲ. ಆದರೂ ಈ ಶತಮಾನದಲ್ಲಿ ಎಂದೂ ಆಗದ ಅಗಾಧ ಮಳೆಯ ಕಾರಣ ನಿರಾಶ್ರಿತರ ಕುಟುಂಬಗಳಿಗೆ ತಾತ್ಕಾಲಿಕ ತೊಂದರೆಯಾಗಿದ್ದು, ಅದನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶಿರಸಿ ಹಾಗೂ ಅಂಕೋಲ ಬಸ್ ನಿಲ್ದಾಣ ಹಾಗೂ ಬಸ್ ಡಿಪೋ.

1574(2149) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉತ್ತರ ಕನ್ನಡ ಜಿಲ್ಲೆಯ ಶಿರಸಿ ಬಸ್ ನಿಲ್ದಾಣವನ್ನು ಹೊಸದಾಗಿ ಅಭಿವೃದ್ಧಿಪಡಿಸುವ ಕಾರ್ಯ ಯಾವ ಹಂತದಲ್ಲಿದೆ ಮತ್ತು ಎಂದು ಪ್ರಾರಂಭಿಸಲಾಗುತ್ತದೆ?

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಬಸ್ ಡಿಪೋವನ್ನು ಹೊಸದಾಗಿ ಅಭಿವೃದ್ಧಿಪಡಿಸುವ ಕಾರ್ಯ ಯಾವ ಹಂತದಲ್ಲಿದೆ ಯಾವಾಗ ಪ್ರಾರಂಭಿಸಲಾಗುವುದು?

ಇ) ಇದರ ಕಾರ್ಯವನ್ನು ಪ್ರಾರಂಭಿಸಲು ಇರುವ ತೊಂದರೆಗಳೇನು?

ಈ) ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಶಿರಸಿಯಲ್ಲಿರುವ ಹಾಲಿ ಬಸ್ ನಿಲ್ದಾಣಕ್ಕೆ ಹೊಸದಾಗಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಯೋಜಿಸಿರುವುದಿಲ್ಲ. ಗಣೇಶ್ ನಗರದಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಲು ದಿನಾಂಕ : 23-6-99 ರಂದು ಟೆಂಡರುಗಳನ್ನು ಪ್ರಕಟಿಸಲಾಗಿದೆ. ನಿಯಮಾನುಸಾರವೂ ಟೆಂಡರುಗಳನ್ನು ಇತ್ಯರ್ಥಪಡಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.